ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
Karnatak University, Dharwad.
ಪರೀಕ್ಷಾ ವಿಭಾಗ
Examination Section

ಗೌಪ್ಯ ವಿಭಾಗ
Confidential Branch

ಫೋನ ನಂ. 0836-2215259
ಫ್ಯಾಕ್ಸ ನಂ. 0836-2741928

ನಂ. ಕವಿವಿ/ಪರೀಕ್ಷಾ(ಗೌಪ್ಯ)/2022/65

ದಿನಾಂಕ: 21.07.2022

## ಸುತ್ತೋಲೆ

**ವಿಷಯ:** ರಾಷ್ಟ್ರೀಯ ಶಿಕ್ಷಣ ನೀತಿ-2020 (NEP) ರ ಅಡಿಯಲ್ಲಿ ಜರುಗಿದ ಪರೀಕ್ಷೆಗಳಲ್ಲಿ ಎಲ್ಲ ಸ್ನಾತಕ ವಿದ್ಯಾರ್ಥಿಗಳ ಪರೀಕ್ಷಾ ವಿವರಗಳನ್ನು (UUCMS) ತಂತ್ರಾಂಶದಲ್ಲಿ ಅಳವಡಿಸುವ ಕುರಿತು.

**ಉಲ್ಲೇಖ:**1) ನಂ.ಕವಿವಿ/ಪರೀಕ್ಷಾ (ಗೌಪ್ಯ)/2022/17 ದಿನಾಂಕ: 13.05.2022
2) ನಂ.ಕವಿವಿ/ಪರೀಕ್ಷಾ (ಗೌಪ್ಯ)/2022/31 ದಿನಾಂಕ:10.06.2022
3) ನಂ.ಕವಿವಿ/ಪರೀಕ್ಷಾ (ಗೌಪ್ಯ)/2022/37 ದಿನಾಂಕ:16.06.2022

-@-

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ವಿಶ್ವವಿದ್ಯಾಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಂಲಗ್ನ ಹಾಗೂ ಘಟಕ ಮಹಾವಿದ್ಯಾಲಯಗಳ ಪ್ರಾಚಾರ್ಯರಿಗೆ ಈ ಮೂಲಕ ತಿಳಿಸುವುದೇನೆಂದರೆ, ರಾಷ್ಟೀಯ ಶಿಕ್ಷಣ ನೀತಿ-2020 (NEP) ರ ಅಡಿಯಲ್ಲಿ ಬರುವ ಎಲ್ಲ ಸ್ನಾತಕ 1ನೇ ಸೆಮೆಸ್ಟರ್ ಪರೀಕ್ಷೆಗಳ ಮೌಲ್ಯಮಾಪನ ಪ್ರಕ್ರಿಯೆ ಪ್ರಾರಂಭಗೊಳಿಸಲು UUCMS ತಂತ್ರಾಂಶದಲ್ಲಿ ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾದ ವರದಿಯನ್ನು ಬ್ಲಾಕ್‌ವೈಸ್ (Block wise) ಹಾಜರಾತಿ ವರದಿಯನ್ನು ನಮೂದಿಸಲು ದಿನಾಂಕ: 20.06.2022ರೊಳಗಾಗಿ ಕಳಿಸಲು ಉಲ್ಲೇಖಿತ '3' ಸುತ್ತೋಲೆಯನ್ವಯ ಸೂಚಿಸಲಾಗಿತ್ತು.

ಮುಂದುವರೆದು, ಕೆಲವೊಂದು ತಾಂತ್ರಿಕ ದೋಷದಿಂದ ಹಾಜರಾತಿ ವರದಿಯನ್ನು ಹಲವಾರು ಮಹಾವಿದ್ಯಾಲಯದವರು ನಮೂದಿಸದೇ ಇರುವ ಕಾರಣ ಹಾಜರಾತಿ ವರದಿಯನ್ನು ಕಡ್ಡಾಯವಾಗಿ ಪೂರೈಸಲು ವಿಸ್ತರಿಸಿದ ದಿನಾಂಕ 25.07.2022 ರೊಳಗಾಗಿ ನಮೂದಿಸತಕ್ಕದ್ದು. ಹಾಗೂ ಎಲ್ಲ ಮಹಾವಿದ್ಯಾಲಯದ ಗಮನಕ್ಕೆ ತರುವುದೇನೆಂದರೆ ಈ ಕೆಳಗೆ ಸೂಚಿಸಿದಂತೆ ಕ್ರಮಕೈಗೊಳ್ಳಲು ತಿಳಿಸಲಾಗಿದೆ. ಸದರ ಮಾಹಿತಿಯನ್ನು ದಿನಾಂಕ: 25.07.2022 ದಿನಾಂಕದೊಳಗಾಗಿ ಸರಿಪಡಿಸಿಕೊಳ್ಳದೇ ಇದ್ದಲ್ಲಿ ಮಹಾವಿದ್ಯಾಲಯದವರೇ ಹೊಣೆಗಾರರಾಗುತ್ತಾರೆ. ಅಲ್ಲದೇ ಅಂತಹ ಮಹಾವಿದ್ಯಾಲಯಗಳ ಪರೀಕ್ಷಾ ಫಲಿತಾಂಶವನ್ನು ಹೊರತುಪಡಿಸಿ (ಬಿಟ್ಟು) ಪ್ರಕಟಿಸಲಾಗುವುದು.

1) Practical Marks Entry
2) Theory Block Creation
3) Attendance
4) Packeting
5) Bundling of Packets

ಸಂಬಂಧಿಸಿದ ಮಹಾವಿದ್ಯಾಲಯದವರು ಹೆಚ್ಚಿನ ಮಾಹಿತಿ ಹಾಗೂ ತಾಂತ್ರಿಕ ಅಡಚಣೆಗೆ ಗಣಕಯಂತ್ರ ವಿಭಾಗದ ದೂರವಾಣಿ ಸಂಖ್ಯೆ 0836-2215261 ಗೆ ಸಂಪರ್ಕಿಸಲು ತಿಳಿಸಲಾಗಿದೆ.

21/07/22

ಕುಲಸಚಿವರು (ಮೌಲ್ಯಮಾಪನ)

ಗೆ,

ಪ್ರಾಚಾರ್ಯರು, ಕರ್ನಾಟಕ ವಿಶ್ವವಿದ್ಯಾಲಯದ ಎಲ್ಲ ಸಂಲಗ್ನ ಹಾಗೂ ಅಧೀನ ಮಹಾವಿದ್ಯಾಲಯಗಳು
ಪ್ರತಿ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :

1. ಸಿಸ್ಟಮ್ ಅನಾಲಿಸ್ಟ, ಗಣಕಯಂತ್ರ ಕೇಂದ್ರ, ಪರೀಕ್ಷಾ ವಿಭಾಗ, ಕ.ವಿ.ವಿ.ಧಾರವಾಡ.
2. ಉಪಕುಲಸಚಿವರು, ವಿದ್ಯಾಮಂಡಳ ವಿಭಾಗ, ಕವಿವಿ., ಧಾತರವಾಡ,
3. ಉಪಕುಲಸಚಿವರು / ಸಹಾಯಕ ಕುಲಸಚಿವರು, ಪರೀಕ್ಷಾ ವಿಭಾಗ, ಕನಾಟಕ ವಿಶ್ವವಿದ್ಯಾಲಯ, ಧಾರವಾಡ.
4. ಪರೀಕ್ಷಾ ವಿಭಾಗದ ಎಲ್ಲ ಶಾಖೆಗಳ ಅಧೀಕ್ಷಕರ ಮಾಹಿತಿಗಾಗಿ.
5. ಕುಲಪತಿಗಳು/ ಕುಲಸಚಿವರು/ ಕುಲಸಚಿವರು (ಮೌಲ್ಯಮಾಪನ) ಇವರ ಆಪ್ತಕಾರ್ಯದರ್ಶಿಗಳು, ಕ.ವಿ.ವಿ., ಧಾರವಾಡ.
6. ನಿರ್ದೇಶಕರು ಅಂತರ್ಜಾಲ ವಿಭಾಗ, ಕ.ವಿ.ವಿ., ಧಾರವಾಡ ಇವರಿಗೆ ಮುಂದುವರೆದು ಸದರ ಸುತ್ತೋಲೆಯನ್ನು ಕ.ವಿ.ವಿ., ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಲಾಗಿದೆ.